# ಕಲಿಕೆಗಾಗಿ ಹೊಸಹಾದಿ ತೆರೆಯೋಣ

# ಮುನ್ನಡೆಯುವ

## ಕನ್ನಡ

## KANNADA

**ತರಗತಿ - 3**

State Council of Educational and Research and Training (SCERT), Kerala.

## ಕಲಿಕೆಗಾಗಿ ಹೊಸಹಾದಿ ತೆರೆಯೋಣ

## ಮುನ್ನಡೆಯುವ

### ಮುನ್ನುಡಿ

ಮಾರಕವಾದ ಕೋವಿಡ್ ಮಹಾಮಾರಿಯ ಅಲೆಯಿಂದ 2019 ರಿಂದ 2021 ರ ವರೆಗೆ ವಿದ್ಯಾರ್ಥಿಗಳಿಗೆ ಪೂರ್ಣ ರೂಪದಲ್ಲಿ ನೇರವಾದ ಕಲಿಕಾನುಭವಗಳು ಲಭಿಸದಿರುವುದರಿಂದ ಅವರ ಕಲಿಕಾ ಗುಣಮಟ್ಟದಲ್ಲಿ ಹಿಂಜರಿಕೆ ಉಂಟಾಗಿರುವುದಾಗಿ 2022 ರ ಕಾಲುವಾರ್ಷಿಕ ಮೌಲ್ಯಮಾಪನದಿಂದ ಲಭಿಸಿದ ಫಲಿತಾಂಶಗಳ ವಿಶ್ಲೇಷಣೆ ಮತ್ತು ಅಧ್ಯಾಪಕರ ಅನುಭವಗಳಿಂದ ವೇದ್ಯವಾಗಿರುತ್ತದೆ. ಮೊದಲಿನ ತರಗತಿಗಳಲ್ಲಿ ವಿದ್ಯಾರ್ಥಿಗಳಿಗೆ ಲಭಿಸಬೇಕಾಗಿದ್ದ ಕೆಲವು ಆಶಯಗಳನ್ನು ಆರ್ಜಿಸುವುದಕ್ಕೂ ಪ್ರಸ್ತುತ ತರಗತಿಯ ಕಲಿಕೆಯನ್ನು ಮತ್ತಷ್ಟು ಉತ್ತಮಗೊಳಿಸುವುದಕ್ಕೂ ಸಹಕಾರಿಯಾಗುವ ಒಂದು ಕಲಿಕಾ ಸಹಾಯಿಯನ್ನು ತಯಾರಿಸಿ ಕೊಡಲಾಗಿದೆ. ಇದರಲ್ಲಿ ವಿದ್ಯಾರ್ಥಿಗೆ ನಷ್ಟವಾದ ಕಲಿಕಾನುಭವಗಳ ಕುರಿತಾದ ವಿವರಗಳನ್ನು ಮತ್ತು ಅದನ್ನು ಪರಿಹರಿಸುವ ಮಾರ್ಗೋಪಾಯಗಳನ್ನು ಸೂಚಿಸಲಾಗಿದೆ. ವಿದ್ಯಾರ್ಥಿಗಳು ಈ ಕಲಿಕಾ ಸಹಾಯಿಯ ನೆರವಿನಿಂದ ಸ್ವಯಂ ಕಲಿಕೆ ಮತ್ತು ಅಧ್ಯಾಪಕರ ಸಹಾಯದಿಂದ ನಷ್ಟವಾದ ಕಲಿಕಾನುಭವಗಳನ್ನು ಪುನಃ ಆರ್ಜಿಸಿಕೊಂಡು ಆತ್ಮವಿಶ್ವಾಸದಿಂದ ಕಲಿಕೆಯಲ್ಲಿ ಮುನ್ನಡೆಯುವಂತಾಗಲಿ ಎನ್ನುವ ಶುಭ ಹಾರೈಕೆ.

**ನಿರ್ದೇಶಕರು,**

**SCERT, ಕೇರಳ**

**ಅಧ್ಯಾಪಕ ಬಂಧುಗಳೇ / ವಿದ್ಯಾರ್ಥಿಗಳೇ,**

ಮಕ್ಕಳಲ್ಲಿ ಉಂಟಾಗಿರುವ ಕಲಿಕಾ ತೊಂದರೆಗಳನ್ನು ಕಂಡುಹಿಡಿದು ಪರಿಹಾರ ಮಾಡಲು ಎಸ್.ಸಿ.ಇ.ಆರ್.ಟಿ ಕೇರಳವು Bridge Material ತಯಾರು ಮಾಡಲು ತೀರ್ಮಾನಿಸಿದೆ. ಇದರ ಅಂಗವಾಗಿ 3 ಮತ್ತು 4 ನೇ ತರಗತಿಯ ಕಾಲುವಾರ್ಷಿಕ ಮೌಲ್ಯಮಾಪನದ ಉತ್ತರ ಪತ್ರಿಕೆಗಳನ್ನು ಸಂಗ್ರಹಿಸಿ, ಪ್ರತಿಯೊಂದು ಚಟುವಟಿಕೆಗಳನ್ನು ವಿಶ್ಲೇಷಿಸಿ, ಮಕ್ಕಳು ಎದುರಿಸುತ್ತಿರುವ ಯಥಾರ್ಥ ಸಮಸ್ಯೆಗಳನ್ನು ಕಂಡುಹಿಡಿಯಲು ತೀರ್ಮಾನಿಸಲಾಯಿತು. ಅದರ ಪರಿಹಾರ ಬೋಧನೆಗಾಗಿ Bridge Material ಅನ್ನು ತಯಾರಿಸಲಾಗಿದೆ.

ಕೋವಿಡ್ ಕಾಲಘಟ್ಟ ಎಂಬುದು ವಿದ್ಯಾರ್ಥಿಗಳ ಕಲಿಕೆಯ ಮೇಲೆ ಹಲವು ರೀತಿಯಲ್ಲಿ ಪ್ರಭಾವ ಬೀರಿದೆ. ವಿದ್ಯಾರ್ಥಿಗಳ ಬೌದ್ಧಿಕ, ಶಾರೀರಿಕ, ಮಾನಸಿಕ ಬದಲಾವಣೆಗಳು ಶೈಕ್ಷಣಿಕವಾದ ಹಿನ್ನಡೆಗೂ ಕಾರಣವಾಗಿದೆ. ಶಿಕ್ಷಣ ಇಲಾಖೆಯು, ಮಕ್ಕಳಿಗೆ ಶಾಲಾದಿನಗಳು ಮತ್ತು ಪಾಠಪ್ರವಚನಗಳು ನಷ್ಟವಾಗದಂತೆ ಆನ್‌ಲೈನ್ ತರಗತಿಗಳ ವ್ಯವಸ್ಥೆ ಮಾಡಿತು. ಈ ತರಗತಿಗಳು ಮಕ್ಕಳ ಅಧ್ಯಯನ ಸಮಯವನ್ನು ಭರ್ತಿ ಮಾಡಿದರೂ, ಅವರಲ್ಲಿ ವಿವಿಧ ರೀತಿಯ ಭಾಷಾ ಸಾಮರ್ಥ್ಯಗಳ ಬೆಳವಣಿಗೆಯಲ್ಲಿ ವಿವಿಧ ರೀತಿಯಲ್ಲಿ ಪರಿಣಾಮ ಬೀರಿತು. ಭಾಷಾ ಕಲಿಕೆಯ ದೋಷಗಳನ್ನು ಪರಿಹರಿಸಲು ಹ್ರಸ್ವಕಾಲದ ಯೋಜನೆಯ ಅಗತ್ಯವಿದೆ.

ಮೌಲ್ಯಮಾಪನ ಎಂಬುದು ವಿದ್ಯಾರ್ಥಿಗಳ ಸಮಗ್ರ ಮೌಲ್ಯನಿರ್ಣಯವಲ್ಲದಿದ್ದರೂ ತರಗತಿಯ ಸಾಮಾನ್ಯ ಸಮಸ್ಯೆಗಳನ್ನು ನಿರ್ಧರಿಸಲು ಮತ್ತು ತನ್ನ ಬೋಧನಾ ತಂತ್ರದಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡಲು ಶಿಕ್ಷಕರಿಗೆ ಸಹಾಯ ಮಾಡುತ್ತದೆ. ಇದಕ್ಕಾಗಿ ಮೂರು ಮತ್ತು ನಾಲ್ಕನೇ ತರಗತಿಯ ವಿವಿಧ ಶಾಲೆಗಳ ನೂರರಷ್ಟು ಉತ್ತರ ಪತ್ರಿಕೆಗಳನ್ನು ಸಂಗ್ರಹಿಸಿ, ಎಲ್ಲಾ ಪ್ರಶ್ನೆಗಳ ಕೂಲಂಕಷ ವಿಶ್ಲೇಷಣೆಯನ್ನು ನಡೆಸಲಾಯಿತು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳ ಭಾಷಾಪರ, ವ್ಯಾಕರಣಪರ, ವ್ಯವಹಾರರೂಪ ಮತ್ತು ಆಸ್ವಾದನಾ ಪರವಾದ ವಿಭಾಗಗಳಲ್ಲಿ ಅವರಲ್ಲಿರುವ ಕೊರತೆಗಳನ್ನು ಗುರುತಿಸಲಾಯಿತು. ಭಾಷಾಪರವಾದ ಪದ, ವಾಕ್ಯ ಬರವಣಿಗೆಯ ಕ್ರಮ, ಅಕ್ಷರತಪ್ಪುಗಳು, ವ್ಯಾಕರಣಪರವಾದ ಪದ - ವಾಕ್ಯರಚನಾ ಕ್ರಮ, ವ್ಯಾಕರಣ ತಪ್ಪುಗಳು, ವ್ಯವಹಾರರೂಪಗಳಲ್ಲಿ ವಿವರಣೆ, ಸಂಭಾಷಣೆ, ಪತ್ರ ಬರವಣಿಗೆ, ಮನವಿ ಪತ್ರ, ವರ್ಣನೆ ಮೊದಲಾದವುಗಳ ಬಗ್ಗೆ ತಿಳುವಳಿಕೆಯ ಕೊರತೆ, ಆಸ್ವಾದನಾಪರವಾದ ವರ್ಣನೆ ಮೊದಲಾದ ಸಮಸ್ಯೆಗಳನ್ನು ಗುರುತಿಸಲಾಯಿತು.

ಕಲಿಕಾ ಸೇತುವಿನಲ್ಲಿರುವ ಚಟುವಟಿಕೆಗಳನ್ನು ಮಾದರಿಯಾಗಿ ತರಗತಿಗಳಲ್ಲಿ ಫಲಪ್ರದವಾಗಿ ಅಳವಡಿಸಬೇಕಾಗಿದೆ. ಜೊತೆಗೆ ಇದೇ ರೀತಿಯಲ್ಲಿರುವ ಚಟುವಟಿಕೆಗಳನ್ನು ಅಧ್ಯಾಪಕರು ಸ್ವತಃ ತಯಾರಿಸಿ ನಡೆಸುವ ಮೂಲಕ ಮಕ್ಕಳ ಭಾಷಾಸಾಮರ್ಥ್ಯ ವಿಕಾಸಕ್ಕೆ ಪ್ರಯತ್ನಿಸಬೇಕಾಗಿದೆ.

**ಕಲಿಕಾ ಚಟುವಟಿಕೆಗಳು**

**3 ನೇ ತರಗತಿ**

## ಉದ್ದೇಶಗಳು

- ಅಕ್ಷರ ತಪ್ಪಿಲ್ಲದೆ ಬರೆಯುವುದು.
- ವಾಚನಾ ಸಾಮಗ್ರಿಯನ್ನು ಉಚ್ಚಾರ ಸ್ಫುಟತೆಯೊಂದಿಗೆ ಆಶಯಗ್ರಹಣ ಮಾಡಿ ಓದುವುದು.
- ಪದಗಳ ನಿರ್ದಿಷ್ಟ ಉಚ್ಚಾರ ತಿಳಿಯುವುದು.
- ಸರಳ ವಾಕ್ಯಗಳಲ್ಲಿ ಆಶಯ ಕೆಡದಂತೆ ಬರೆಯುವುದು.
- ಸರಳ ಸಂಭಾಷಣೆ ಆಲಿಸುವುದು. / ಓದುವುದು. / ರಚಿಸುವುದು.
- ಕಾರ್ಟೂನ್ ಪಕ್ಷಿಗಳ ಸರಳ ಸಂಭಾಷಣೆಯನ್ನು ವಿವಿಧ ಮಾಧ್ಯಮಗಳ ಮೂಲಕ ವೀಕ್ಷಿಸುವುದು. ಸ್ವಂತವಾಗಿ ಬರೆಯುವುದು.
- ಸರಳ ಭಾಷೆಯಿಂದೊಡಗೂಡಿದ ಸಂದರ್ಶನ ಪ್ರಶ್ನಾವಳಿಗಳನ್ನು ತಯಾರಿಸುವುದು.

**ಅಧ್ಯಾಪಕರೊಡನೆ....**

♦ ಕಾಲುವಾರ್ಷಿಕ ಮೌಲ್ಯಮಾಪನದ ಅನಂತರ ನಡೆಯುವ ಪಾಠಭಾಗಗಳಿಗೆ ಸಂಬಂಧಿಸಿದ ಚಟುವಟಿಕೆಗಳನ್ನು ತಯಾರಿಸಲಾಗಿದೆ.

♦ ಹೆಚ್ಚು ಮಕ್ಕಳಲ್ಲಿ ಕಂಡುಬಂದ ಸಮಸ್ಯೆಯ ಪರಿಹಾರಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ನೀಡಲಾಗಿದೆ.

♦ ಆಯಾ ಪಾಠಭಾಗಕ್ಕೆ ಹೊಂದಿಕೊಂಡು ಚಟುವಟಿಕೆಯನ್ನು ಮಕ್ಕಳಿಂದ ಮಾಡಿಸಬೇಕು.

♦ ಪಾಠದ ಆರಂಭದಲ್ಲಿ - ಮಧ್ಯದಲ್ಲಿ - ಕೊನೆಯಲ್ಲಿ ಹೀಗೆ ಸೂಕ್ತವಾದ ಸಂದರ್ಭಗಳಲ್ಲಿ ಉಪಯೋಗಿಸಬೇಕು.

♦ ಚಟುವಟಿಕೆ ನಡೆಯುವ ಸಮಯದಲ್ಲಿ ಮಕ್ಕಳಿಗೆ ಸರಿಯಾದ ಸೂಚನೆ/ಮಾಹಿತಿ ನೀಡಬೇಕು.

♦ ಈ ಚಟುವಟಿಕೆಗಳಿಗೆ ಪೂರಕವಾಗಿ ಕೆಲವೊಂದು ಚಟುವಟಿಕೆಗಳನ್ನು ಅಧ್ಯಾಪಕರು ಸ್ವತಃ ತಯಾರಿಸಿ ನೀಡಬಹುದು.

♦ ಆರಂಭದಲ್ಲಿ ಓದಲು, ಬರೆಯಲು ಸಮಸ್ಯೆಗಳಿರುವ ಮಕ್ಕಳಿಗೆ ಸಣ್ಣ ಮಟ್ಟಿನ ಸಹಾಯ ನೀಡಬೇಕು.

## ಯೂನಿಟ್ 4 – ದುಡಿಮೆಯ ಹಿರಿಮೆ

**1. ಕಸುಬಿನಾಟ**

ಮಕ್ಕಳು ವೃತ್ತಾಕಾರವಾಗಿ ನಿಲ್ಲುವುದು. ಮೊದಲಿಗೆ ಪರಿಚಯದಾಟ. ಮಕ್ಕಳು ಸ್ವತಃ ಅವರ ಹೆಸರನ್ನು ಗಟ್ಟಿಯಾಗಿ ಹೇಳುವುದು. ಜೊತೆಗೆ ಒಂದು ಕಸುಬು / ಕೆಲಸದ ಹೆಸರನ್ನು ಹೇಳುವುದು.

ವಿವಿಧ ಕೆಲಸಗಳ / ಕಸುಬುಗಳ ಪರಿಚಯ ಆದ ನಂತರ ತರಗತಿಯಲ್ಲಿ ಕೆಲಸದ ಮಹತ್ವದ ಕುರಿತು ತರಗತಿಯಲ್ಲಿ ಕಿರು ಚರ್ಚೆ ನಡೆಸಿರಿ. (ಅಧ್ಯಾಪಕರು ಚರ್ಚೆ ಮುಂದುವರಿಸುವುದು.)

- ಕಸುಬು ಯಾಕೆ ಬೇಕು?
- ನಿಮಗೆ ಯಾವ ಕಸುಬು ಇಷ್ಟ?
- ಕಸುಬುಗಳಿಂದ ಇರುವ ಪ್ರಯೋಜನಗಳೇನು?

ಇತ್ಯಾದಿ..

ಮಕ್ಕಳು ಉತ್ತರಗಳನ್ನು ಬಾಯ್ದೆರೆಯಾಗಿ ಹೇಳುವುದು.

**2. ಅಭಿನಯದಾಟ**

(ಅಧ್ಯಾಪಕರು ಮಕ್ಕಳ ಸಂಖ್ಯೆಗನುಸರಿಸಿ ವಿವಿಧ ಕಸುಬುಗಳ ಹೆಸರುಗಳನ್ನು ಬರೆದ ಚೀಟಿಗಳನ್ನು ಮಕ್ಕಳಿಗೆ ನೀಡುವುದು.)

ಎಲ್ಲರೂ ನಿಮಗೆ ಸಿಕ್ಕಿದ ಚೀಟಿಯಲ್ಲಿರುವ ಕಸುಬಿನ ಹೆಸರನ್ನು ಓದಲು ಪ್ರಯತ್ನಿಸಿರಿ. ಕಷ್ಟವಾದಲ್ಲಿ ಹತ್ತಿರದ ಮಗುವಿನ ಸಹಾಯ ಪಡೆಯಿರಿ. ನಂತರ ಆ ಕಸುಬಿನ ಹೆಸರನ್ನು ನೋಟುಪುಸ್ತಕದಲ್ಲಿ ಬರೆಯಿರಿ. ನಿಮಗೆ ಸಿಕ್ಕಿದ ವಿಷಯವನ್ನು ಅಭಿನಯಿಸಿರಿ. ಒಂದು ಮಗು ಅಭಿನಯಿಸುವಾಗ ಉಳಿದ ಮಕ್ಕಳು ಆ ಕಸುಬನ್ನು ಗುರುತಿಸುವುದು ಮತ್ತು ಅದರ ಹೆಸರನ್ನು ಗಟ್ಟಿಯಾಗಿ ಹೇಳಿರಿ. ಬಳಿಕ ಆ ಹೆಸರನ್ನು ನಿಮ್ಮ ನೋಟುಪುಸ್ತಕದಲ್ಲಿ ಬರೆಯಿರಿ.

ನಂತರ ಮಕ್ಕಳ ಅಭಿನಯದ ಕುರಿತು ವಾಕ್ಯರೂಪದಲ್ಲಿ ಹೇಳಿರಿ.

ಉದಾಹರಣೆ –

1. ರಮೇಶನು ಮಣ್ಣು ತುಂಬಿಸುತ್ತಾನೆ.
2. ಸೀತ ನೀರು ಸೇದುತ್ತಾಳೆ.
3. ಅಜಿತ್ ಸೈಕಲ್ ತುಳಿಯುತ್ತಾನೆ.

ಈ ವಾಕ್ಯಗಳನ್ನು ಗಟ್ಟಿಯಾಗಿ ಎರಡು ಮೂರು ಸಲ ಆವರ್ತಿಸಿ ಹೇಳುವುದು.

## ವರ್ಕ್ ಶೀಟ್ 1

1. ಚಿತ್ರ ನೋಡಿ ವಾಕ್ಯ ಪೂರ್ತಿಗೊಳಿಸಿರಿ.



ರಮೇಶ .............................. ತುಂಬಿಸುತ್ತಾನೆ.



ಸೀತ ನೀರು ..........................................




ಮಲ್ಲಿಕ .................................. ಗುಡಿಸುತ್ತಾಳೆ.





ಹೆಂಗಸರು ನೇಜಿ ......................................

## ವರ್ಕ್‌ಶೀಟ್ 2

**ಪಾಠ ಭಾಗ ಪ್ರವೇಶ – ಪಾಠಭಾಗ ಪೂರ್ತಿಗೊಳಿಸಿದ ನಂತರ**









1. ಪಾಠಭಾಗದಲ್ಲಿ ಯಾವೆಲ್ಲ ಜೀವಿಗಳಿವೆ? ಅವುಗಳ ಹೆಸರುಗಳನ್ನು ಹೇಳಿರಿ.
2. ಇರುವೆಯ ಕೆಲಸವೇನು?
3. ನಾಯಿಯ ಕೆಲಸವೇನು?
4. ಕೋಗಿಲೆಯ ಕೆಲಸವೇನು?


ಉತ್ತರವನ್ನು ಬಾಯ್ದೆರೆಯಾಗಿ ಗಟ್ಟಿಯಾಗಿ ಹೇಳಿರಿ.

3.


– ಇರುವೆಯು ...................................... ಕೊಂಡೊಯ್ಯುತ್ತದೆ.


– ನಾಯಿಯು ...................................... ಕಾಯುತ್ತದೆ.


– ಚಿಟ್ಟೆಯು ...................................... ಹೀರುತ್ತದೆ.


– ಕೋಗಿಲೆಯು ...................................... ಕೂಗುತ್ತದೆ.

## ವರ್ಕ್‌ಶೀಟ್ 3

**4. ಸಂಭಾಷಣೆ ತಯಾರಿ**

(ಮಕ್ಕಳನ್ನು ಎರಡೆರಡು ಜನರ ಗುಂಪು ಮಾಡುವುದು. ಎರಡೆರಡು ಕಥಾಪಾತ್ರಗಳನ್ನು ಹಂಚುವುದು.)

ಉದಾಹರಣೆ

| ನಾಯಿ - ಮಗು | ಇರುವೆ - ಮಗು | ಚಿಟ್ಟೆ - ಮಗು | ಕೋಗಿಲೆ - ಮಗು |
|---|---|---|---|

ಪದ್ಯದ ಆಧಾರದಲ್ಲಿ ಸಂಭಾಷಣೆಯನ್ನು ನಿಮ್ಮದೇ ಆದ ರೀತಿಯಲ್ಲಿ ಹೇಳಿರಿ. (ಅಧ್ಯಾಪಕರು ಚರ್ಚೆಯ ಮೂಲಕ ಎಲ್ಲಾ ಆಶಯ ಬರುವ ರೀತಿಯಲ್ಲಿ ಸಹಾಯ ಮಾಡುವುದು.) ಈ ರೀತಿಯಾಗಿ ಎಲ್ಲಾ ಜೀವಿಗಳ ಮತ್ತು ಮಗುವಿನ ಸಂಭಾಷಣೆಯನ್ನು ಬಾಯ್ದೆರೆಯಾಗಿ ಹೇಳಿರಿ. (ಎಲ್ಲಾ ಗುಂಪಿನವರು)

**ಸಂಭಾಷಣೆ ಬರೆಯುವ**

ಮಗು :
ಇರುವೆ :
ಮಗು :
ಇರುವೆ :

ಮಗು :
ಚಿಟ್ಟೆ :
ಮಗು :
ಚಿಟ್ಟೆ :

ಮಗು :
ನಾಯಿ :
ಮಗು :
ನಾಯಿ :

ಮಗು :
ಕೋಗಿಲೆ :
ಮಗು :
ಕೋಗಿಲೆ :

## ವರ್ಕ್‌ಶೀಟ್ 4

**5. ಪದ ಬದಲಿಸಿ ಹೇಳುವ**

(ಅಧ್ಯಾಪಕರು ಒಂದು ವಾಕ್ಯವನ್ನು ಬಾಯ್ದೆರೆಯಾಗಿ ಹೇಳುವುದು. ಸೂಚಿಸಿದ ಪದವನ್ನು ಬದಲಾಯಿಸಿ ಮಕ್ಕಳು ವಾಕ್ಯವನ್ನು ಹೇಳುವುದು.)

ಉದಾಹರಣೆ : ಅವನು ಹಾಲು ತಂದನು.

ಅವನು ಎಂಬ ಪದದ ಬದಲು ಅವಳು ಎಂಬ ಪದವನ್ನು ಸೇರಿಸಿ ವಾಕ್ಯ ಮುಂದುವರಿಸಿರಿ.

(ಮಕ್ಕಳು ವಾಕ್ಯಗಳನ್ನು ಹೇಳುವ ಸಂದರ್ಭದಲ್ಲಿ ಒಂದೆರಡು ಬಾರಿ ತಪ್ಪಿದ ಭಾಗವನ್ನು ತಿದ್ದಿ ಹೇಳಲು ಅವಕಾಶ ನೀಡುವುದು.)

ಕೋಣೆಯಲ್ಲಿರುವ ಪದಗಳನ್ನು ಆಯ್ದು ವಾಕ್ಯ ಬದಲಾಯಿಸಿ ಬರೆಯಿರಿ.

ಜಲಜ ಗೆಳೆಯರ ಜೊತೆ ಓದಿದಳು.

ವಿನು ಮಗನಿಗೆ ಹಣ ನೀಡಿದನು.

ಅವನು ಚೆನ್ನಾಗಿ ಆಡುತ್ತಾನೆ.

| |
|---|
| ಅವಳು |
| ಮಗಳಿಗೆ |
| ಗೆಳತಿಯರ |
| ಹುಡುಗಿಯರು |

ಇದೇ ರೀತಿ ನೀವು ಸ್ವಂತವಾಗಿ ಎರಡು ವಾಕ್ಯ ರಚಿಸಿರಿ.

..........................................................................................

..........................................................................................

ಇಂತಹ ವಾಕ್ಯಗಳನ್ನು ಮಾದರಿಯಂತೆ ಬದಲಾಯಿಸಿ ಗಟ್ಟಿಯಾಗಿ ಹಲವು ಸಲ ಬಾಯ್ದೆರೆಯಾಗಿ ಹೇಳಿರಿ. ಅನಂತರ ಒಂದೊಂದೇ ವಾಕ್ಯವನ್ನು ಬರೆಯಿರಿ.

ಪಠ್ಯಪುಸ್ತಕದ ಚಟುವಟಿಕೆಯನ್ನು ಮುಂದುವರಿಸುವುದು.

## ವರ್ಕ್‌ಶೀಟ್ 5

**6. ನೋಡಿ ಬರೆಯೋಣ**

'ಮೊದಲು ನನ್ನ ಕೆಲಸ ಮಾಡುವೆ' ಪದ್ಯದಲ್ಲಿ ಬಂದಿರುವ ಜೀವಿಗಳ ಹೆಸರುಗಳನ್ನು ನೆನಪಿಸಿರಿ. ವೈಯಕ್ತಿಕವಾಗಿ ಬರೆಯಿರಿ. (ತರಗತಿಯಲ್ಲಿ ಮಂಡನೆ. ಕರಿಹಲಗೆ / ಚಾರ್ಟ್‌ನಲ್ಲಿ ಬರೆಯುವುದು.)

| ಇರುವೆ, ನಾಯಿಮರಿ, ಜೇನುಹುಳು, ಕೋಗಿಲೆ |
|---|

ಮಕ್ಕಳು ನಾಲ್ಕು ಗುಂಪುಗಳಾಗಿ ನಿಲ್ಲುವುದು. ತರಗತಿಯ ಇನ್ನೊಂದು ಮೂಲೆಯಲ್ಲಿ ಬೆಂಚಿನ ಮೇಲೆ ನಾಲ್ಕು ಕಾಗದಗಳನ್ನು ಸಮಾನ ದೂರದಲ್ಲಿ ಇರಿಸುವುದು. ಎಲ್ಲಾ ಮಕ್ಕಳು ಮತ್ತೊಂದು ಬದಿಯಲ್ಲಿ ಸಮಾನ ದೂರದಲ್ಲಿ ನಾಲ್ಕು ಸಾಲಾಗಿ ನಿಲ್ಲುವುದು. ಎಲ್ಲರ ಕೈಯಲ್ಲೂ ಪೆನ್ನು ಇರಬೇಕು. ಅಧ್ಯಾಪಕರು ಸೀಟಿ ಊದಿದಾಗ ಪ್ರತಿಯೊಬ್ಬರೂ ಓಡಿ ಬಂದು ಒಂದೊಂದು ಜೀವಿಯ ಹೆಸರು ಬರೆಯುವುದು. ನಾಲ್ಕು ಮಂದಿಯು ಬರೆದು ಮುಗಿಸಿದಾಗ ಆಟ ನಿಲ್ಲಿಸುವುದು. ತಾವು ಬರೆದ ಪದವನ್ನು ಪಾಠಪುಸ್ತಕದ ಪದದೊಂದಿಗೆ ಹೋಲಿಸಿ ನೋಡುವುದು. ತಪ್ಪಾದ ಅಕ್ಷರಗಳಿಗೆ ಉರುಟು ಹಾಕುವುದು. ಸರಿಯಾಗಿದ್ದರೆ ಸರಿಯೆಂದೂ, ತಪ್ಪಾಗಿದ್ದರೆ ತಪ್ಪು ಇರುವುದನ್ನು ಕಂಡುಹಿಡಿದು ಯಾವುದು ಹೇಗೆ ಎಂಬುದನ್ನು ವಿವರಿಸಲು ಆ ಪದ ಬರೆದ ಮಗುವಿಗೆ ಅವಕಾಶ ನೀಡುವುದು.

ಒಂದು ಮಗುವಿಗೆ ಹೇಳಲು ಸಾಧ್ಯವಾಗದಿದ್ದರೆ ಆ ಗುಂಪಿನ ಇತರರಿಗೆ ಅವಕಾಶ ನೀಡುವುದು. ಗುಂಪು ಬದಲಾಯಿಸಿಯೂ ನೀಡಬಹುದು.

(ನೋಟುಬುಕ್‌ನಲ್ಲಿ ಮನೆಕೆಲಸವಾಗಿ, ಪದ್ಯದಲ್ಲಿ ಬಂದಿರುವ ಜೀವಿಗಳು ಯಾವುವು? ಉತ್ತರ ಬರೆದು ತರಲು ಹೇಳುವುದು. ಮರುದಿನ...)

ಪದ್ಯದಲ್ಲಿ ಬಂದಿರುವ '**ಕಾಕದೃಷ್ಟಿ ತಪ್ಪಿಸಲ್ಕೆ ಹೊಂಚಿನಲ್ಲಿ ಇರುವೆ**' ಈ ಸಾಲುಗಳ ಬಗ್ಗೆ ಚರ್ಚೆ ನಡೆಸಿರಿ.

ಆಶಯವನ್ನು ವೈಯಕ್ತಿಕವಾಗಿ ಊಹಿಸಲು ಹೇಳಿರಿ. ಒಬ್ಬೊಬ್ಬರು ಗುಟ್ಟಾಗಿ ಟೀಚರಲ್ಲಿ ಹೇಳಿರಿ. ಪಾಠಪುಸ್ತಕದ ಚಿತ್ರ ವೀಕ್ಷಿಸಿ ಹೇಳಿರಿ.

- ಕಾಕ ಪದದ ಅರ್ಥವೇನು? – ಕಾಗೆ
- ಕೋಗಿಲೆ ಯಾರಿಗೆ ಹೆದರಿತು? – [ ]

ಉತ್ತರವನ್ನು ವೈಯಕ್ತಿಕವಾಗಿ ಬರೆಯಿರಿ.

| ಕ, ಕಾ, ಕೊ, ಕೋ |
|---|

ವ್ಯತ್ಯಾಸಗಳ ಚರ್ಚೆ ನಡೆಸಿರಿ. ಮಕ್ಕಳು ಬಾಯ್ದೆರೆಯಾಗಿ ಮಂಡನೆ ಮಾಡಲಿ.

ಪ್ರತಿಯೊಂದು ಅಕ್ಷರದ ವಿವಿಧ ಪದಗಳನ್ನು ಬರೆಯಿರಿ.

| ಕದ, ಕಸ, ಕನ್ನಡ, ಕರ |
|---|
| ಕಾಗೆ, ಕಾಕ, ಕಾರು, ಕಾಡು |

| |
|---|
| ಕೊಡಲಿ, ಕೊಡು, ಕೊರಗು, ಕೊರಡು |
| ಕೋಗಿಲೆ, ಕೋವಿಡ್, ಕೋಣ, ಕೋಪ |

**7. ಒತ್ತಕ್ಷರಗಳು ಯಾವುವು?**

| | | |
|---|---|---|
| ಅಕ್ಕಸಾಲಿಗ | ್ಕ | ಕ |
| ಕಮ್ಮಾರ | ್ಮ | ಮ |
| ರೈತ | ೖ | ಐ |
| ವರ್ತಕ | ರ್ | ರ |

**8. ಗೆರೆ ಎಳೆದು ಜೋಡಿಸಿರಿ.**

| | |
|---|---|
| ರ | ೖ |
| ಕ | ್ಮ |
| ಐ | ರ್ |
| ಮ | ್ಕ |

**9. ಅಡಗಿರುವವರು ಯಾರು?**

| | |
|---|---|
| ಕ್ಕ | ಕ್ + ಕ್ + ಅ |
| ಮ್ಮಾ | ಮ್ + ಮ್ + ಆ |
| ರೈ | ರ್ + ಅ + ಐ |
| ರ್ತ | ರ್ + ತ್ + ಅ |

ಸಜಾತೀಯ ಒತ್ತಕ್ಷರಗಳು ಬರುವ ಪದಗಳನ್ನು ಕಂಡುಹಿಡಿಯಿರಿ.

ಉದಾ - ಅಜ್ಜ, ಹುಚ್ಚ, ಹಗ್ಗ, ಅಕ್ಕ,

..........................................................................................

..........................................................................................

..........................................................................................

..........................................................................................

ವಿಜಾತೀಯ ಒತ್ತಕ್ಷರಗಳು ಬರುವ ಪದಗಳು ಯಾವುವು?

ಉದಾಹರಣೆ : ಸೂರ್ಯ, ವರ್ತಕ, ಕೃತಕ, ಅತ್ರಿ, ಆದಿತ್ಯ

..................................................................................................

..................................................................................................

..................................................................................................

**10. ಕೆಲಸಗಳು ಯಾವುವು? ಉರುಟು ಹಾಕಿರಿ.**

| | | | |
|---|---|---|---|
| ಕೃಷಿ, | ತೊಡುಗೆ, | ಕನಸು, | ಹುಡುಗಿ |
| ಬಡಗಿ, | ವ್ಯಾಪಾರ, | ಗಿಡುಗ, | ಅಡುಗೆ |

..............................................

..............................................

..............................................

**11. ಅಕ್ಷರದಲ್ಲಿ ಅಡಗಿರುವ ಅಕ್ಷರಗಳು ಯಾವುವು?**

| | | | |
|---|---|---|---|
| ರ | ರ್ + ಅ | ತ | ತ್ + ಅ |
| ರೆ | ರ್ + ಎ | ರ್ತ | ರ್ + ತ್ + ಅ |
| ರೇ | ರ್ + ಏ | ತ್ಯ | ತ್ + ಯ + ಅ |
| ರೈ | ರ್ + ಐ | | |

**12. ಈ ಕೆಳಗಿನ ಅಕ್ಷರಗಳಿಂದ ಆರಂಭವಾಗುವ ಪದಗಳನ್ನು ಬರೆಯಿರಿ.**

ರ - ರಜೆ, ................ , ...................

ರೆ - .................. , ರೆಂಬೆ

ರೇ - ರೇಗು, .........................

ರೈ - ............... , ರೈತ

**ಅಧ್ಯಾಪಕರಿಗಾಗಿ**

ರವಿ, ರಮ, ರವೀಂದ್ರ, ರಜನಿ, ರಮೆ, ಬೇರೆ, ಗೆರೆ, ಮರೆ, ತೆರೆ, ಹೊರೆ, ಅವರೆ, ರೇಣುಕ, ರೇಗು.

## 13. ಮರುಳ ಕಾಗೆ

ಕಾಗೆಯೊಂದು ಹಾರಿಬಂದು
ಮರದ ಮೇಲೆ ಕುಳಿತುಕೊಂಡು
ಬಾಯಲಿದ್ದ ಮಾಂಸವನ್ನು ತಿನ್ನತೊಡಗಿತು.
ಠಕ್ಕ ನರಿ ಇದನು ಕಂಡು
ಮಾಂಸವನ್ನು ಎತ್ತಲೆಂದು
ಮರದ ಕೆಳಗೆ ಓಡಿಬಂದು ನಿಂತುಕೊಂಡಿತು
ಕಾಕರಾಜ ನೀನು ನಮ್ಮ
ವನಕೆ ಬಹಳ ದಿನಕೆ ಬಂದೆ
ನಿನ್ನ ಕಂಡು ನನ್ನ ಮನಕೆ ಹರುಷವಾಯಿತು
ನಿನ್ನ ಗರಿಗಳೆಷ್ಟು ಚಂದ
ನಿನ್ನ ಬಣ್ಣ ಎಷ್ಟು ಅಂದ
ನಿನ್ನ ರಾಗವನ್ನು ಕೇಳಿ ಜನರು ಕುಣಿವರು
ಕಾಕರಾಜ ನೀನು ಈಗ
ಹಾಡನೊಂದು ಹಾಡು ಬೇಗ
ವನದೊಳಿದ್ದ ಪಶುಗಳೆಲ್ಲ ಕೇಳಿ ಕುಣಿಯಲಿ
ಮರುಳ ಕಾಗೆ ನರಿಯ ನುಡಿಗೆ
ಮರುಳುಗೊಂಡು ಹರುಷದಿಂದ
ಕಾವು ಕಾವು ಎಂದು ದೊಡ್ಡ ದನಿಯ ತೆಗೆಯಿತು
ದನಿಯ ತೆಗೆಯಲೊಡನೆ ಅದರ
ಬಾಯೊಳಿದ್ದ ಮಾಂಸವೆಲ್ಲ
ನರಿಯ ಬಾಯೊಳಗೆ ಬಿದ್ದುಬಿಟ್ಟಿತು
ಮಾಂಸವನ್ನು ನುಂಗಿ ನರಿಯು
ಹರುಷದಿಂದ ಕುಣಿದು ಕುಣಿದು
ಕಾಗೆಯನ್ನು ನೋಡಿ ನೋಡಿ ನಗುತ ನಿಂದಿತು
ಮಾಂಸವನ್ನು ಕಳೆದುಕೊಂಡು
ಅದಕೆ ಬಹಳ ಬುದ್ಧಿ ಬಂದು
ಠಕ್ಕನನ್ನು ನಂಬಬೇಡಿ ಎಂದು ಸಾರಿತು.

– ಸಿ.ಫ.ಕಟ್ಟಿಮನಿ

ಈ ಪದ್ಯವನ್ನು ರಾಗವಾಗಿ ಹಾಡಿರಿ.

ತರಗತಿಯಲ್ಲಿ ಚೆನ್ನಾಗಿ ಹಾಡಿ ಅಭಿನಯಿಸಬಲ್ಲ ವಿದ್ಯಾರ್ಥಿಯನ್ನು ಸೂತ್ರಧಾರನಾಗಿಯೂ, ಕೆಲವು ಮಕ್ಕಳನ್ನು ನರಿಯಾಗಿಯೂ ಅಭಿನಯಿಸುತ್ತಾ, ಈ ಪದ್ಯವನ್ನು ಭಾವಪೂರ್ಣವಾಗಿ ಮಂಡಿಸಿರಿ. ಆ ಬಳಿಕ ತರಗತಿಯ ಎಲ್ಲರೂ ಒಟ್ಟಾಗಿ ಹಾಡಿರಿ. ಪ್ರಾಸಪದ ಕಂಡುಹಿಡಿಯಿರಿ.

ಮರುಳ ಕಾಗೆ ಪದ್ಯದಲ್ಲಿರುವ ಪ್ರಾಸಪದಗಳನ್ನು ಕಂಡುಹಿಡಿಯಿರಿ. ಮಕ್ಕಳು ಎರಡರಂತೆ ಗುಂಪಾಗಲಿ.

ವೈಯಕ್ತಿಕವಾಗಿ ಬರೆಯಿರಿ.

(ಬರೆದ ಪದಗಳನ್ನು ಕರಿಹಲಗೆಯಲ್ಲಿ ಬರೆಯಲು ಅವಕಾಶ ಕಲ್ಪಿಸುವುದು.)

ಕುಳಿತುಕೊಂಡು - ಎಂಬ ಪದವನ್ನು ಒಬ್ಬ ವಿದ್ಯಾರ್ಥಿಯು ಬರೆದರೆ ಆ ಪದವನ್ನು ಎಲ್ಲಾ ಮಕ್ಕಳು ಗಟ್ಟಿಯಾಗಿ ಓದುವುದು.

ಈ ಪದಕ್ಕೆ ಪ್ರಾಸಪದವಾಗಿ ಬರುವ ಪದವನ್ನು ಪುಸ್ತಕದಿಂದ ಕಂಡುಹುಡುಕಿರಿ.

ಅಧ್ಯಾಪಿಕೆ ಒಬ್ಬರನ್ನು ಕರೆದಾಗ ಓಡಿಬಂದು ಕರಿಹಲಗೆಯಲ್ಲಿ ಬರೆಯಲಿ. ಇನ್ನೊಂದು ಪದವನ್ನು ಕಂಡುಹುಡುಕುವುದು.

ಇನ್ನೊಬ್ಬ ವಿದ್ಯಾರ್ಥಿಯು ಆ ಪದವನ್ನು ಓದುವುದು. ಎಲ್ಲರೂ ಗಟ್ಟಿಯಾಗಿ ಓದುವುದು.

ವಿದ್ಯಾರ್ಥಿಗಳು ಆ ಪದಕ್ಕೆ ಸರಿಯಾದ ಪ್ರಾಸಪದವನ್ನು ಹುಡುಕುವುದು.

ಬೇರೊಬ್ಬ ವಿದ್ಯಾರ್ಥಿಯು ಓಡಿಬಂದು ಆ ಪದದ ಪ್ರಾಸಪದವನ್ನು ಬರೆಯುವುದು.

ಹೀಗೆ ಆಟ ಮುಂದುವರಿಯುವುದು.

**14. ಕಥೆ ಬರೆಯೋಣ**

ಒಂದು ಕಾಗೆಯು ಹಾರುತ್ತಾ ಬಂತು. ಮರದ ಮೇಲೆ ಕುಳಿತಿತು. ..................................................... (ಅಧ್ಯಾಪಿಕೆ ಕಥೆಯನ್ನು ಹೇಳಲು ಆರಂಭಿಸುವುದು.) ಅನಂತರ ಮಕ್ಕಳು ಕಥೆಯನ್ನು ಬಾಯ್ದೆರೆಯಾಗಿ ಹೇಳಿರಿ. ಅನಂತರ ವೈಯಕ್ತಿಕವಾಗಿ ಬರೆಯಿರಿ. ಕೆಲವು ಮಕ್ಕಳು ಕಥೆಯನ್ನು ಮಂಡಿಸುವುದು. ಬರೆದ ಕಥೆಯಲ್ಲಿ ಅಕ್ಷರ ತಪ್ಪುಗಳಿವೆಯೇ ಎಂದು ಕಂಡುಹಿಡಿಯಿರಿ.

**15. ವರ್ಣನೆ**

ಹೂವಿನ ಚಿತ್ರವನ್ನು ನೋಡಿದಿರಲ್ಲವೇ? ಇದರ ಕುರಿತು ಕೆಲವು ವಾಕ್ಯಗಳನ್ನು ಹೇಳಿರಿ.

ಬಾಯ್ದೆರೆ ಮಂಡನೆಯ ಬಳಿಕ ಅಧ್ಯಾಪಕರು ಚಿತ್ರಕ್ಕೆ ಸಂಬಂಧಿಸಿದ ಕೆಲವು ಪ್ರಶ್ನೆಗಳನ್ನು ಕೇಳುವುದು.

- ಇದು ಏನು?
- ಇದರ ಬಣ್ಣ ಯಾವುದು?
- ಹೂವು ಹೇಗಿದೆ?
- ಎಷ್ಟು ಹೂಗಳಿವೆ?
- ಅವುಗಳಿಗೆ ಎಷ್ಟು ದಳಗಳಿವೆ?



16. ಹೂವಿನ ಕುರಿತಾಗಿ ಕೆಳಗೆ ನೀಡಲಾದ ಸರಳ ವಾಕ್ಯಗಳನ್ನು ಓದಿರಿ.

ಹೂ


ಬಣ್ಣದ ಹೂ


ಚಂದವಾದ ಬಣ್ಣದ ಹೂ

ಹಳದಿ ಬಣ್ಣದ ಚಂದವಾದ ಹೂ

ಹಲವು ದಳಗಳ ಹಳದಿ ಬಣ್ಣದ ಚಂದವಾದ ಹೂ

17. ಚಿತ್ರ ನೋಡಿ ಇದೇ ರೀತಿಯಲ್ಲಿ ವಾಕ್ಯಗಳನ್ನು ಬರೆಯಿರಿ.









## ಯೂನಿಟ್ 5

### 18. ಪ್ರವಾಸಾನುಭವ

ನಿಮ್ಮ ಮನೆಯ ಸಮೀಪವಿರುವ ಯಾವುದಾದರೂ ಸ್ಥಳಗಳಿಗೆ ಪ್ರವಾಸ ಹೋಗಿದ್ದೀರಾ? ತಂದೆ ತಾಯಂದಿರ ಜೊತೆ ನೀವು ಹೋದ ಸ್ಥಳಗಳನ್ನು ನೆನಪಿಸಿಕೊಳ್ಳಿ. ಅಲ್ಲಿ ನೀವು ಕಂಡುಕೊಂಡ ವಿಚಾರಗಳನ್ನು ಮತ್ತು ನಿಮ್ಮ ಅನುಭವಗಳನ್ನು ಬರೆಯಿರಿ.

ಕೆಳಗೆ ನೀಡಲಾದ ಪ್ರಶ್ನಾವಳಿಗಳನ್ನು ಅಧ್ಯಾಪಕರ ಸಹಾಯದಿಂದ ಓದಿರಿ. ಉತ್ತರವನ್ನು ಬಾಯ್ದೆರೆಯಾಗಿ ಹೇಳಿರಿ.

1. ನೀವು ಹೋದ ಸ್ಥಳದ ಹೆಸರೇನು?
2. ನೀವು ಹೋದದ್ದು ಯಾವಾಗ?
3. ಯಾರೆಲ್ಲ ಹೋದದ್ದು?
4. ನೀವು ಹೋದದ್ದು ಹೇಗೆ?
5. ಅಲ್ಲಿಗೆ ತಲುಪಿದ ಸಮಯ ಎಷ್ಟು?
6. ಹೋಗುವಾಗ ದಾರಿಯಲ್ಲಿ ನೋಡಿದ ಸುಂದರ ದೃಶ್ಯಗಳು ಯಾವುವು?
7. ನಿಮಗೆ ಇಷ್ಟವಾದ ವಿಚಾರಗಳು ಯಾವುವು?
8. ನೀವು ಹಿಂತಿರುಗಿ ಬಂದ ಸಮಯ ಎಷ್ಟು?
9. ಪ್ರವಾಸ ಮುಗಿಸಿ ನಿಮ್ಮ ಮನೆಗೆ ತಲುಪುವಾಗ ಸಮಯ ಎಷ್ಟು?

ಈ ಪ್ರಶ್ನೆಗಳಿಗೆ ಬಾಯ್ದೆರೆಯಾಗಿ ಹೇಳಿದ ವಿಚಾರಗಳನ್ನು ವಾಕ್ಯರೂಪದಲ್ಲಿ ಉತ್ತರವಾಗಿ ಬರೆಯಿರಿ.

**19. ಪದ್ಯ ರಚನೆ**

ನಿಮಗೂ ಪದ್ಯ ರಚಿಸಲು ಆಸಕ್ತಿಯಿದೆಯೇ?

ಪದ್ಯ ರಚಿಸುವುದು ಹೇಗೆ?

ಪದ್ಯ ರಚಿಸುವಾಗ ಗಮನಿಸಬೇಕಾದ ವಿಚಾರಗಳೇನು?

- ವಸ್ತು
- ವಸ್ತುವಿನ ಗುಣಸ್ವಭಾವ,
- ವಸ್ತುವಿನ ರೂಪ,
- ವಸ್ತುವಿನ ರಚನೆ,
- ವಸ್ತುವಿನ ಬಣ್ಣ,
- ನಡೆನುಡಿ,
- ವಸ್ತುವಿನ ಆಕಾರ,
- ವಸ್ತುವಿನ ರುಚಿ,
- ಸ್ಥಾನ,
- ವಸ್ತುವಿನ ಮೌಲ್ಯ.

ಇವುಗಳ ಆಧಾರದಲ್ಲಿ ಪದಸೂರ್ಯ ರಚಿಸುವುದು.

ತಂದೆ ತಾಯಿ, ಪ್ರೀತಿ, ಜೋಗುಳ, ನಡೆಸು, ತೊಟ್ಟಿಲ ತೂಗು, ಮಾತು, ನಗು, ತಿಂಡಿ, ಓದು, ಪಾಠ, ಗದರಿಸು, ಕೆಲಸ, ಕಥೆ, ಆಡು, ಬಟ್ಟೆ....

ತೊಟ್ಟಿಲ ತೂಗಿ ಜೋಗುಳ ಹಾಡಿ
ಕಥೆಯನು ಹೇಳುವ ನನ್ನಮ್ಮ
ಪ್ರೀತಿಯ ಮಾತಲಿ ಮೋಡಿಯ ಮಾಡಿ
ನನ್ನನು ನಡೆಸಿದ ನನ್ನಪ್ಪ

.....................................................................

.....................................................................

.....................................................................

.....................................................................